ದಿನಾಂಕಃ **11/12/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರವಾಗಿ ಶ್ರೀ ಹೆಚ್ ಪಿ ಎಸ್ ವಕೀಲರಿಂದಃ

1. ನನ್ನ ಹಾಗೂ ಎದುರುದಾರರ ಮಗಳ ಮದುವೆ ದಿಃ 09-05-2013 ರಲ್ಲಿ ಆಗಿರುತ್ತದೆ. ನಾನು ವಿವಾಹದ ವೇಳೆಯಲ್ಲಿ ಸಾಕಷ್ಟು ವರದಕ್ಷಿಣೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರ ಮಗಳು ಗುಲಶಿರ್ಬಾನು ರವರು ನನ್ನ ಜೊತೆ 2 ವಾರಗಳಷ್ಟು ಕಾಲ ಮಾತ್ರ ಅನ್ಯೋನ್ಯವಾಗಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಗುಲಶಿರ್ಬಾನು ರವರು 12 ವರ್ಷಗಳ ಕಾಲ ಚೆನ್ನಾಗಿ ಜೀವನ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ನನ್ನ ಹೆಂಡತಿ ಗುಲಶಿರ್ಬಾನು ರವರಿಗೆ ವರದಕ್ಷಿಣೆ ತರಬೇಕೆಂದು ಹಿಂಸೆ ನೀಡುತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿ ಗುಲಶಿರ್ಬಾನು ರವರನ್ನು ವರದಕ್ಷಿಣೆ ತರದೇ ಇರುವ ಕಾರಣ ಅವರ ತಂದೆ ತಾಯಿಯ ಮನೆಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಗುಲಶಿರ್ಬಾನು ರವರು ಮಗು ಜನನವಾಗುವವರೆಗೂ ಅವರ ತಂದೆಯ ಮನೆಯಲ್ಲೇ ಇದ್ದರು ಎಂದರೆ ಸರಿಯಲ್ಲ. ಜಯಶ್ರೀ ನರ್ಸಿಂಗ್ ಹೋಂ ಹಾಸನದಲ್ಲಿ ಮಗುವಿನ ಜನನ ಆಗಿರುತ್ತದೆ. ಮಗು ಜನನ ವಾದ ಬಗ್ಗೆ ಜನನ ಪ್ರಮಾಣ ಪತ್ರ ನನ್ನ ಬಳಿ ಇರುತ್ತದೆ. ಮಗುವಿನ ಜನನಕ್ಕೆ ಸಂಬಂಧಪಟ್ಟ ದಾಖಲಾತಿಗಳು ನನ್ನ ಬಳಿ ಇರಬಹುದು. ಎದುರುದಾರರೇ ಮಗುವಿನ ಜನನದ ವೇಳೆಯಲ್ಲಿ ಆಸ್ಪತ್ರೆಯ ಖರ್ಚುಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಗುವಿನ ಜನನದ ನಂತರ ನಾನು ನನ್ನ ಹೆಂಡತಿ ಮಗುವನ್ನು ನನ್ನ ಮನೆಗೆ ಕರೆದುಕೊಂಡು ಹೋಗಿರುತ್ತೇನೆ.

2. ಮಗು ಜನಿಸಿದ ನಂತರ UKG ವಿದ್ಯಾಭ್ಯಾಸವನ್ನು International School Bheriya ದಲ್ಲಿ ಇರುತ್ತದೆ. ಎದುರುದಾರರ ಮನೆ ಮೂಕನಹಳ್ಳಿ, ಸದರಿ ಮೂಕನಹಳ್ಳಿ Bheriya ಗೆ ಹತ್ತಿರದಲ್ಲಿ ಇರುತ್ತದೆ. ಮಗುವಿನ ಶಾಲಾ ದಾಖಲಾತಿ ಧೃಡೀಕರಣ ಪತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಒಪ್ಪಿದ್ದರಿಂದ ಅದನ್ನು ನಿ.ಆರ್.1 ಎಂದು ಗುರುತಿಸಲಾಯಿತು. Paradise International School Bheriya ದಲ್ಲಿ ನನ್ನ ಮಗುವಿನ ವಿದ್ಯಾಭ್ಯಾಸವು 3ನೇ ತರಗತಿವರೆಗೆ ಆಗಿರುತ್ತದೆ ಎಂದರೆ ಸರಿಯಲ್ಲ. 3 ಮತ್ತು 4ನೇ ತರಗತಿಯನ್ನು ಅರಕಲಗೂಡಿನ

BGS ಶಾಲೆಯಲ್ಲಿ ಮಗು ವಿದ್ಯಾಬ್ಯಾಸ ಮಾಡಿರುತ್ತದೆ. ನಿ.ಆರ್.1 ರಲ್ಲಿ ಮಗುವಿನ ವಿದ್ಯಾಭ್ಯಾಸ 1 ರಿಂದ 3ನೇ ತರಗತಿವರೆಗೆ Paradise International School Bheriya ದಲ್ಲಿ ಆಗಿರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗುವಿನ 3ನೇ ತರಗತಿ ವಿದ್ಯಾಭ್ಯಾಸವನ್ನು ಅರಕಲಗೂಡಿನ BGS ಶಾಲೆಯಲ್ಲಿ ಮಾಡಿಸಿದ ಬಗ್ಗೆ ನನ್ನ ಬಳಿ ದಾಖಲಾತಿ ಇರುತ್ತದೆ. ಆ ದಾಖಲಾತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮಗುವಿನ ವಿದ್ಯಾಭ್ಯಾಸವನ್ನು ನಾನು ಮಾಡಿಸದೇ ಇರುವ ಕಾರಣ ಮಗುವಿನ ವಿದ್ಯಾಭ್ಯಾಸದ ಸಂಪೂರ್ಣ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ಗುಲಶಿರ್ಬಾನು ರವರು ತೀರಿಕೊಳ್ಳುವ ಮೊದಲು ಅರಕಲಗೂಡು ತಾಲೂಕಿನ ಮೋಕಳಿ ಗ್ರಾಮದ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತಿದ್ದರು ಎಂದರೆ ಅತಿಥಿ ಶಿಕ್ಷಕರಾಗಿ ಕೆಲಸ ಮಾಡುತಿದ್ದರು ಎಂದು ನುಡಿಯುತ್ತಾರೆ. ಆ ಸಂಬಂಧ ಅರಕಲಗೂಡಿನ ಸಾಲಗೇರಿಯಲ್ಲಿ ನನ್ನ ಹೆಂಡತಿ ಮನೆ ಮಾಡಿಕೊಂಡು ಇದ್ದರು ಎಂದರೆ ಸಾಕ್ಷಿದಾರರು ನಾನೇ ಮನೆ ಮಾಡಿಕೊಂಡು ಅಲ್ಲಿ ಜೀವನ ಮಾಡುತಿದ್ದೆ ಎಂದು ನುಡಿಯುತ್ತಾರೆ. ಸಾಲಗೇರಿ ಗ್ರಾಮದಲ್ಲಿ ಮನೆ ಮಾಡಿದ ನಂತರ Bheriya ದಿಂದ BGS ಶಾಲೆಗೆ 4ನೇ ತರಗತಿಗೆ ತಂದು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ  ಗುಲಶಿರ್ಬಾನು ರವರು ತೀರಿಕೊಳ್ಳುವ ಪೂರ್ವದಲ್ಲಿ 2 ತಿಂಗಳ ಗರ್ಬಿಣಿಯಾಗಿದ್ದರು ಎಂದರೆ ಸರಿ. ನನ್ನ ಹೆಂಡತಿ ಗರ್ಭಿಣಿಯಾಗಿದ್ದನ್ನು ಗರ್ಭಪಾತ ಮಾಡಿಸಬೇಕೆಂದು ನಾನು ಸಾಕಷ್ಟು ಗಲಾಟೆ ಮಾಡಿದ್ದೆ ಎಂದರೆ ಸರಿಯಲ್ಲ. ದಿಃ 30-12-2023 ರಲ್ಲಿ ಬೆಳಿಗ್ಗೆಯಿಂದಲೂ ಗಲಾಟೆ ಪ್ರಾರಂಭ ಮಾಡಿದ್ದೆ ಎಂದರೆ ಸರಿಯಲ್ಲ. ಆ ಗಲಾಟೆಯಲ್ಲಿ ನಾನು ನನ್ನ ಹೆಂಡತಿಗೆ ಒದ್ದ ಕಾರಣ ರಕ್ತಸ್ರಾವ ಉಂಟಾಯಿತು ಎಂದರೆ ಸರಿಯಲ್ಲ. ಈ ಕುರಿತು ಅರಕಲಗೂಡಿನ ಪುಣ್ಯ ಕ್ಲಿನಿಕ್ ಗೆ ಚಿಕಿತ್ಸೆಗಾಗಿ ಆ ದಿವಸ ಕರೆದುಕೊಂಡು ಬರಲಾಯಿತು. ಸಾಕ್ಷಿದಾರರು ಮುಂದುವರೆದು ಆ ದಿವಸ ನನ್ನ ಹೆಂಡತಿಗೆ ಚಳಿ ಇದ್ದ ಕಾರಣ ಪುಣ್ಯ ಕ್ಲಿನಿಕ್ ಗೆ ಕರೆದುಕೊಂಡು ಬರಲಾಯಿತು. ದಿಃ 30-12-2023 ರಂದು ನಾನು ಮನೆಯಲ್ಲೇ ಇದ್ದೆ. ಆ ದಿವಸ ಪುಣ್ಯ ಆಸ್ಪತ್ರೆಯ ವೈದ್ಯರು injection ನೀಡಿದ ನಂತರ ನನ್ನ ಹೆಂಡತಿ ಪ್ರಜ್ಞೆ ತಪ್ಪಿ ಹೋದರು. ಆ ಕುರಿತು ನಾನು ಚಿಕಿತ್ಸೆಗಾಗಿ ನನ್ನ ಹೆಂಡತಿ ಗುಲಶಿರ್ಬಾನು ರವರು ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗ ಮದ್ಯದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 30-12-2023 ರಂದು ನನ್ನ ಮಗ ಸಹ ಮನೆಯಲ್ಲೇ ಇತ್ತು. ನಾನು ನನ್ನ ಹೆಂಡತಿ ಗಲಾಟೆ ಮಾಡಿ ನನ್ನ ಹೆಂಡತಿಗೆ ನಾನು ಒದ್ದಿರುವುದನ್ನು ನನ್ನ ಮಗು ನೋಡಿರುತ್ತದೆ ಎಂದರೆ ಸರಿಯಲ್ಲ. ನನ್ನ ವಿರುದ್ಧ criminal ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ಮಗು 2ನೇ ಸಾಕ್ಷಿದಾರ ಎಂದರೆ ಸರಿ. ನನ್ನ ಹೆಂಡತಿ ತೀರಿಕೊಂಡ ನಂತರ

ನಾನು ಮಗುವನ್ನು ನೋಡಿಕೊಳ್ಳುತ್ತಿಲ್ಲ ಎಂದರೆ ಸಾಕ್ಷಿದಾರರು ಎದುರುದಾರರು ಮಗುವನ್ನು ಎಲ್ಲಿ ಕರೆದುಕೊಂಡು ಹೋಗಿ ಇಟ್ಟುಕೊಂಡಿರುತ್ತಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ವಿರುದ್ಧ ದಾಖಲಾಗಿರುವ criminal ಪ್ರಕರಣ ಈಗ ನಡೆಯುತ್ತಿದೆ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ಮಗು ನನ್ನ ವಿರುದ್ಧ ಸಾಕ್ಷಿ ಹೇಳಬಾರದು ಎಂಬ ದೃಷ್ಟಿಯಿಂದ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗುವಿನ ವಿದ್ಯಾಭ್ಯಾಸದ ಖರ್ಚುಗಳನ್ನು ನಾನು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ಈಗ ತೋರಿಸಲಾದ ಬಿಲ್ BGS ಶಾಲೆಯವರು ನೀಡಿರುವ ಬಿಲ್ ಎಂದು ಸಾಕ್ಷಿದಾರರು ಒಪ್ಪಿದ್ದರಿಂದ ಅದನ್ನು ನಿ.ಆರ್.2 ಎಂದು ಗುರುತಿಸಲಾಯಿತು. ಮಗುವಿನ ಶಾಲೆಯ ಬಿಲ್ ಮೊತ್ತವನ್ನು ಪಾವತಿ ಮಾಡದೇ ಇರುವ ಕಾರಣ BGS ಶಾಲೆಯಿಂದ ಮಗುವನ್ನು ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ವೇಳೆಯಲ್ಲಿ ಎದುರುದಾರರು ಶಾಲಾ ಶುಲ್ಕ ರೂ.12,000/- ನಿ.ಆರ್.2 ರಂತೆ ಪಾವತಿ ಮಾಡಿ ಶಾಲೆಗೆ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಆರ್.2 ಎದುರುದಾರರು ಹಣ ಪಾವತಿಸಿದ ಬಗ್ಗೆ ನೀಡಲಾದ ರಶೀದಿಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗನ ಶಾಲಾ ಶುಲ್ಕವನ್ನು ಪಾವತಿಸಿದ ಬಗ್ಗೆ ನನ್ನ ಬಳಿ ದಾಖಲಾತಿ ಇರುತ್ತದೆ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಮಗು ಈಗ ಹಳ್ಳಿ ಮೈಸೂರಿನ ಶಾಲೆಯಲ್ಲಿ 5ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತಿದ್ದಾನೆ ಎಂದರೆ ಸರಿ. ಈಗ ತೋರಿಸಲಾದ ಶಾಲಾ ಶುಲ್ಕದ ಬಿಲ್ ಅನುಗ್ರಹ ವಿದ್ಯಾ ಸಂಸ್ಥೆ ಹಳ್ಳಿಮೈಸೂರು ರವರು ನೀಡಿರುವ ಬಿಲ್ ಆಗಿರುತ್ತದೆ ಎಂದು ತೋರಿಸಲಾಗಿ ಸಾಕ್ಷಿದಾರರು ಒಪ್ಪಿದ್ದರಿಂದ ಅದನ್ನು ನಿ.ಆರ್.3 ಎಂದು ಗುರುತಿಸಲಾಯಿತು. ಹಳ್ಳಿಮೈಸೂರು ಶಾಲೆಯ ನನ್ನ ಮಗನ ವಿದ್ಯಾಭ್ಯಾಸದ ಬಿಲ್ಲುಗಳನ್ನು ನಾನು ಪಾವತಿಸಿಲ್ಲ ಕಾರಣ ನನ್ನ ಮಗುವನ್ನು ಎಲ್ಲಿ ವಿದ್ಯಾಬ್ಯಾಸ ಮಾಡಿಸುತಿದ್ದಾರೆ ಎಂದು ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

3. ಅರ್ಜಿಯಲ್ಲಿ 1 ತಿಂಗಳ ಹಿಂದೆ ನನ್ನ ಮಗುವನ್ನು ಎದುರುದಾರರು ಕರೆದುಕೊಂಡು ಹೋಗಿರುತ್ತಾರೆ ಎಂದು ಹೇಳಿದ್ದು ಅದು ಯಾವ ತಿಂಗಳು ಎಂದು ಹೇಳಲು ಆಗುವುದಿಲ್ಲ. ಅರ್ಜಿ ದಾಖಲಿಸುವ ಮುಂಚೆಯಿಂದಲೂ ನನ್ನ ಮಗು ಎದುರುದಾರರ ಮನೆಯಲ್ಲಿ ಇದ್ದುಕೊಂಡು ಶಾಲೆಗೆ ಹೋಗುತ್ತಿದೆ ಎಂದರೆ ನನ್ನ ಹೆಂಡತಿ ತೀರಿಕೊಂಡ ನಂತರ ಎದುರುದಾರರು ನನ್ನ ಮಗುವನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರ. ದಿಃ 04-11-2024 ರಂದು ನಾನು ಎದುರುದಾರರ ಮನೆಗೆ ಹೋಗಿರುವುದಿಲ್ಲ ಎಂದರೆ ಸಾಕ್ಷಿದಾರರು ನನ್ನ ಅಣ್ಣ ತಮ್ಮಂದಿರು ಹೋಗಿದ್ದರು ಆದರೆ ನನಗೆ ಅಲ್ಲಿ ಹೋಗಲು ಬಿಟ್ಟಿರಲಿಲ್ಲ ಎಂದು ನುಡಿಯುತ್ತಾರೆ.

ದಿಃ 11-02-2024 ರಂದು ನನ್ನ ಮಗು ಬಿದ್ದು ಕೈ ಮೂಳೆ ಮುರಿದುಕೊಂಡಿದ್ದ ವಿಷಯ ನನಗೆ ಗೊತ್ತಿತ್ತು. ಆ ರೀತಿ ಮೂಳೆ ಮುರಿದುಕೊಂಡಿದ್ದ ವಿಷಯ ನಂತರದಲ್ಲಿ ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಮಗುವಿಗೆ ಚಿಕಿತ್ಸೆ ಕೊಡಿಸುವ ಪ್ರಯತ್ನ ಮಾಡಿರುವುದಿಲ್ಲ. ಎದುರುದಾರರು ರೂ.48,000/- ಹಣವನ್ನು ಜನಪ್ರಿಯ ಆಸ್ಪತ್ರೆಯಲ್ಲಿ ಖರ್ಚು ಮಾಡಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗುವಿನ ವಿದ್ಯಾಭ್ಯಾಸ ಹಾಗೂ ಆತನ ಆರೋಗ್ಯದ ಖರ್ಚುಗಳನ್ನು ನಾನು ನೋಡಿಕೊಂಡಿರುವುದಿಲ್ಲ ಎಂದರೆ ಎದುರುದಾರರು ನನಗೆ ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಮಗುವಿನ ಜನನದಿಂದ ಇಲ್ಲಿಯವರೆಗೂ ಆತನ ಖರ್ಚು ವೆಚ್ಚಗಳನ್ನು ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಗುವಿನ ಪೋಷಕನಾಗಿ ಆತನ ಯೋಗಕ್ಷೇಮ ನೋಡಿಕೊಳ್ಳುವುದು ನನ್ನ ಕರ್ತವ್ಯ ಎಂದರೆ ಎದುರುದಾರರು ನನಗೆ ಬಿಟ್ಟುರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು